ಶ್ರೀ ಪಿ.ಜಿ.ಆರ್ ಸಿಂಧ್ಯಾ (ಗೃಹ ಸಚಿವರು) :

ಅ) 354.

ಆ) 280.

ಇ) 89.

ಈ) 49.

ಜೀವಾವಧಿ ಶಿಕ್ಷೆ ಕಡಿಮೆ ಮಾಡುವುದು

701 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *9ನೇ ವಿಧಾನ ಸಭೆಯಲ್ಲಿ "ಜೀವಾವಧಿ" ಶಿಕ್ಷೆಯನ್ನು ಪಕ್ಕದ ರಾಜ್ಯಗಳಂತೆ 14 ವರ್ಷಗಳಿಂದ 10 ವರ್ಷಗಳಿಗೆ ಇಳಿಸುವ ತಿದ್ದುಪಡಿಯನ್ನು ಮಾಡಲಾಗಿತ್ತು.*

ಆ) *ಹಾಗಿದ್ದಲ್ಲಿ, ಅದು ಇನ್ನೂ ಜಾರಿಗೆ ಬರದಿರಲು ಕಾರಣವೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹಸಚಿವರು) :

ಅ) ಇಲ್ಲ

ಆ) ಜೀವಾವಧಿ ಶಿಕ್ಷೆಯನ್ನು 14 ವರ್ಷಗಳಿಂದ 10 ವರ್ಷಗಳಿಗೆ ಇಳಿಸಲು ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರಸ್ತಾಪಿಸಿದ ದಂಡ ಪ್ರಕ್ರಿಯೆ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ 1992ಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡದೇ ಇರುವುದರಿಂದ ಸದರಿ ವಿಧೇಯಕವನ್ನು ಹಿಂದಕ್ಕೆ ಪಡೆಯಲಾಗಿದೆ.

ಪೋಲೀಸ್ ಸಬ್‌ಇನ್ಸಪೆಕ್ಟರ್ ನೇಮಕಾತಿ.

702 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ(ಪಾಂಡವಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರೊಬೇಷನರಿ ಪೋಲೀಸ್ ಸಬ್‌ಇನ್ಸಪೆಕ್ಟರ್ (ಸಿವಿಲ್) ಹುದ್ದೆಗೆ 1994ರಲ್ಲಿ ನೇಮಕಾತಿಯನ್ನು ಮಾಡಿ ತರಬೇತಿಯನ್ನು ಕೊಟ್ಟು 15 ತಿಂಗಳು ಸೇವೆ ಸಲ್ಲಿಸಿರುವವರನ್ನು ರದ್ದುಗೊಳಿಸಿರುವುದು ನಿಜವೇ?*

ಆ) *ಈ ರೀತಿ ರದ್ದುಗೊಳಿಸಿದ 13 ಮಂದಿಯಲ್ಲಿ ಒಬ್ಬರನ್ನು ಮಾತ್ರ ಪುನಃ ನೇಮಕಾತಿ ಮಾಡಿ ಉಳಿದ 12 ಮಂದಿಯನ್ನು ನೇಮಕಾತಿ ಮಾಡದಿರುವುದು ನಿಜವೇ? ಹಾಗಿದ್ದಲ್ಲಿ, ಕಾರಣವೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಹೌದು.

ಆ) ಹೌದು. ಕರ್ನಾಟಕ ಆಡಳಿತ ನ್ಯಾಯಮಂಡಳಿ ಆದೇಶದಂತೆ ಮೀಸಲಾತಿಯ ಪ್ರಮಾಣವನ್ನು ಪ್ರತಿತಶ 50ಕ್ಕೆ ನಿಗಧಿಗೊಳಿಸಿ ಮೊದಲು ನೇಮಕಾತಿ ಹೊಂದಿದವರ ಪಟ್ಟಿಯನ್ನು ಹೊಸದಾಗಿ ಮಾಡಿದ್ದರಿಂದ 12 ಜನರು ಸ್ಥಾನ ಕಳೆದ ಹೊರಗುಳಿದರು. ಆದುದರಿಂದ ಅವರ ನೇಮಕಾತಿಯನ್ನು ರದ್ದು ಮಾಡಲಾಯಿತು. ಇವರುಗಳಿಗೆ ಸ್ಥಾನಗಳಿಲ್ಲದಿದ್ದುದರಿಂದ ನೇಮಕಾತಿ ಮಾಡಲಾಗಿಲ್ಲ. ಆದರೆ ಇವರಲ್ಲಿ ಒಬ್ಬರಾದ ಶ್ರೀ ಪ್ರಭಾಕರರಾವ್ ಶಿಂದೆ ಇವರಿಗೆ ಮಾಜಿಯೋಧರ ಕೋಟಾದಲ್ಲಿ ಒಂದು ಸ್ಥಾನವು ಲಭ್ಯವಾದ ಕಾರಣ ಅವರನ್ನು ಪುನರ್ ನೇಮಕಾತಿಗೊಳಿಸಲಾಗಿದೆ.

ಕೇಂದ್ರದಿಂದ ಯೋಜನೆಗಳಿಗೆ ಬರುತ್ತಿರುವ ಹಣ

703 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೇಂದ್ರದಿಂದ ಯೋಜನೆಗಳಿಗೆ ಯಾವ ಯಾವ ಬಾಬಿನಿಂದ ಎಷ್ಟು ಹಣ ಬರುತ್ತದೆ? ಒಟ್ಟು ಹಣದ ಮೊತ್ತ ಎಷ್ಟು?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು) :

1) 1994-95ನೇ ಸಾಲಿನಲ್ಲಿ ಯೋಜನೆಗಳಿಗೆ ಬಂದಿರುವ ಒಟ್ಟು ಹಣದ ವಿವರ ಈ ಕೆಳಕಂಡಂತಿದೆ.

(ಕೋಟಿ ರೂಪಾಯಿಗಳಲ್ಲಿ)

ಯೋಜನೇತರ ಅನುದಾನ	35.63
ಯೋಜನೇತರ ಸಾಲಗಳು	747.85
ರಾಜ್ಯ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ	208.69
ರಾಜ್ಯದ ಯೋಜನಾ ಕಾರ್ಯಕ್ರಮಗಳಿಗೆ ಸಾಲ	460.64
ಕೇಂದ್ರ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ	111.96
ಕೇಂದ್ರ ಯೋಜನಾ ಕಾರ್ಯಕ್ರಮಗಳಿಗೆ ಸಾಲ	0.31
ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗ ಅನುದಾನ	339.20
ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗಾಗಿ ಸಾಲ	12.52
ಒಟ್ಟು	**1916.80**